DAY — **11** SEAT NUMBER | | | | | | |

2025	II	25	1100	**J-332**	(K)

CO-OPERATION (53)

Time : 3 Hrs. **(4 Pages)** **Max. Marks : 80**

ಸೂಚನೆ : (1) ಎಲ್ಲ ಪ್ರಶ್ನೆಗಳನ್ನು ಬಿಡಿಸುವದು ಅವಶ್ಯಕವಾಗಿರುತ್ತದೆ.

(2) ಬಲಬದಿಯ ಅಂಕಗಳು ಪೂರ್ಣ ಗುಣಗಳನ್ನು ಸೂಚಿಸುತ್ತವೆ.

(3) ಎಡಬದಿಯ ಅಂಕಿಗಳು ಪ್ರಶ್ನೆಯ ಕ್ರಮಾಂಕಗಳನ್ನು ಸೂಚಿಸುತ್ತವೆ.

(4) ಪ್ರತಿಯೊಂದು ಪ್ರಶ್ನೆಯ ಉತ್ತರವನ್ನು ಹೊಸ ಪುಟದ ಮೇಲೆ ಪ್ರಾರಂಭಿಸತಕ್ಕದ್ದು.

ಪ್ರ. 1.(ಅ) ಕೆಳಗೆ ಕೊಟ್ಟ ಪರ್ಯಾಯಗಳಿಂದ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಿಧಾನಗಳನ್ನು ಪೂರ್ಣ ಮಾಡಿ ಪುನಃ ಬರೆಯಿರಿ : (5) **[20]**

(1) ಸಭೆಯನ್ನು ನಿಲ್ಲಿಸುವ ಅಧಿಕಾರ ..... ಇತನಿಗೆ ಇರುತ್ತದೆ.

(ಅ) ಅಧ್ಯಕ್ಷ (ಬ) ನಾಮಮಾತ್ರ ಸದಸ್ಯ (ಕ) ಕಾರ್ಯದರ್ಶಿ

(2) ಜಾಗತಿಕೀಕರಣದ ಪ್ರಕ್ರಿಯೆ ನಂತರ ಸಹಕಾರಿ ಸಂಸ್ಥೆಗಳಿಗೆ ಸರಕಾರದ ಕಡೆಯಿಂದ ಕೊಡಲಾಗುವ ಸಹಾಯದಲ್ಲಿ ..... ಮಾಡಲಾಗಿರುತ್ತದೆ.

(ಅ) ಹೆಚ್ಚಳ (ಬ) ಸ್ಪರ್ಧೆ (ಕ) ಕಡಿಮೆ

(3) ನೋಂದಣಿಯ ಅರ್ಜಿಯ ಜೊತೆಗೆ ಉಪವಿಧಿಯ ..... ಪ್ರತಿಗಳನ್ನು ಜೋಡಿಸಬೇಕಾಗುತ್ತದೆ.

(ಅ) ಎರಡು (ಬ) ನಾಲ್ಕು (ಕ) ಆರು

(4) ಭಾರತದಲ್ಲಿಯ ಮೊದಲನೆಯ ಸಹಕಾರಿ ಸಂಸ್ಥೆಯ ಕಾಯ್ದೆ ..... ವರ್ಷದಲ್ಲಿ ಜಾರಿಗೆ ಬಂದಿರುತ್ತದೆ.

(ಅ) 1912 (ಬ) 1904 (ಕ) 1925

(5) ವೈಕುಂಠ ಮೆಹತಾ ರಾಷ್ಟ್ರೀಯ ಸಹಕಾರಿ ಪ್ರಬಂಧನ ಸಂಸ್ಥೆ ಇದು ..... ಸ್ಥಳದಲ್ಲಿ ಇರುತ್ತದೆ.

(ಅ) ಪುಣೆ (ಬ) ನಾಗಪುರ (ಕ) ಹೊಸದಿಲ್ಲಿ

(ಬ) ಸರಿಯಾಗಿ ಹೊಂದಿಸಿ ಬರೆಯಿರಿ : (5)

'ಅ' ಗುಂಪು	'ಬ' ಗುಂಪು
(ಅ) ಮ್ಯಾಕ್ಲೆಗನ್ ಸಮಿತಿಯ ವರದಿ	(1) ಸಹಕಾರಿ ಸಂಸ್ಥೆಯ ಅಸ್ತಿತ್ವ
(ಬ) ಅಂತಿಮ ಸಭೆ	(2) ಸಹಕಾರಿ ಸಂಸ್ಥೆಯ ಸೇವಕ
(ಕ) ಕಾರ್ಯದರ್ಶಿ	(3) 1915
(ಡ) ಗ್ರಾಹಕ	(4) ಸಹಕಾರಿ ಸಂಸ್ಥೆಯ ಸಾಹುಕಾರ
(ಇ) ಜಿಲ್ಲಾ ಉಪನಿಬಂಧಕ	(5) ಸಹಕಾರಿ ಸಂಸ್ಥೆಯ ಅಂತ್ಯ
	(6) ರಾಜ್ಯ ಪಾತಳಿ
	(7) ಸ್ಪರ್ಧೆಯುಳ್ಳ ಮಾರುಕಟ್ಟೆಯ ರಾಜ
	(8) 1951
	(9) ದುಯ್ಯಮ ಸ್ಥಾನ
	(10) ಜಿಲ್ಲಾ ಪಾತಳಿ

(ಕ) ಕೆಳಗಿನ ವಿಧಾನಗಳು 'ಸರಿ' ಅಥವಾ 'ತಪ್ಪು' ಎಂಬುದನ್ನು ಹೇಳಿರಿ : (5)

(1) ಸಹಕಾರಿ ಸಂಸ್ಥೆಗಳ ದೃಷ್ಟಿಯಲ್ಲಿ ಲೆಕ್ಕಪರಿಶೋಧನೆ ಮಹತ್ವದ್ದಾಗಿರುತ್ತದೆ.

(2) ಅವೈಧಾನಿಕ ಪುಸ್ತಕಗಳನ್ನು ತಯಾರು ಮಾಡುವದು ಕಾಯ್ದೆ ಅನುಸಾರ ಬಂಧನಕಾರಕವಿರುತ್ತದೆ.

(3) ಅಧ್ಯಕ್ಷನ ಅನುಪಸ್ಥಿತಿಯಲ್ಲಿ ಹುದ್ದೆಯನ್ನು ಕಾರ್ಯದರ್ಶಿಯು ಸಂಭಾಳಿಸುತ್ತಾನೆ.

(4) ಸಹಕಾರಿ ಪತ್ತಿನ ಪೂರೈಕೆಯ ರಚನೆಯು ತ್ರಿಸ್ಥರಿಯದ್ದಾಗಿರುತ್ತದೆ.

(5) ಸಹಕಾರಿ ಸಂಸ್ಥೆಯ ಆಯುಕ್ತ ಮತ್ತು ನಿಬಂಧಕನ ಆಯ್ಕೆಯನ್ನು ರಾಜ್ಯ ಸರಕಾರವು ಮಾಡುತ್ತದೆ.

(ಡ) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ : (5)

(1) ಡಾ. ಧನಂಜಯರಾವ ಗಾಡಗಿಳ ಸಹಕಾರಿ ಪ್ರಬಂಧನ ಸಂಸ್ಥೆಯ ಸ್ಥಾಪನೆಯ ಪ್ರಮುಖ ಉದ್ದೇಶ ಯಾವುದು ?

(2) ಲಾಭಾಂಶ ಎಂದರೇನು ?

(3) ಸಭೆಯ ಕಾರ್ಯಕ್ರಮ ಪತ್ರಿಕೆ ಎಂದರೇನು ?

(4) ತಾಲುಕಾ ಪಾತಳಿಯ ಮೇಲೆ ಸಹಕಾರಿ ಸಂಸ್ಥೆಗಳ ಪ್ರಮುಖ ನಿಯಂತ್ರಣ ಅಧಿಕಾರಿ ಯಾರು ಇರುತ್ತಾರೆ ?

(5) ನಿರಂತರ ಲೆಕ್ಕಪರಿಶೋಧನೆ ಎಂದರೇನು ?

ಪ್ರ. 2. ಕೆಳಗಿನ ಸಂಜ್ಞೆ / ಸಂಕಲ್ಪನೆಯನ್ನು ಸ್ಪಷ್ಟೀಕರಿಸಿರಿ (ಬೇಕಾದ ನಾಲ್ಕು) : [8]

(1) ಕಾರ್ಯಕಾರಿ ಸಮಿತಿ

(2) ಹೊಸ ಆರ್ಥಿಕ ಧೋರಣೆ

(3) ನಾಮಮಾತ್ರ ಸದಸ್ಯ

(4) ಮಧ್ಯಸ್ಥ (Arbitrator)

(5) ಕೋಶಾಧ್ಯಕ್ಷ (Treasurer)

(6) ಸಹಕಾರದ ತರಬೇತಿ

ಪ್ರ. 3. ಕೆಳಗಿನ ವಿಧಾನಗಳ ಬಗ್ಗೆ ಸ್ವತದ ಅನಿಸಿಕೆಯನ್ನು ಬರೆಯಿರಿ (ಬೇಕಾದ ಎರಡು) : [6]

(1) ಪಟ್ಟಣ ಸಹಕಾರಿ ಬ್ಯಾಂಕಿನ ಸಾಲ ಪೂರೈಕೆಯಿಂದ ಸ್ವಯಂ ಉದ್ಯೋಗಕ್ಕೆ ಪ್ರೇರಣೆ ಸಿಗುತ್ತದೆ.

(2) ಸಹಕಾರಿ ಸಂಸ್ಥೆಗಳು ಮೀಸಲಾದ ನಿಧಿಯನ್ನು ನಿರ್ಮಿಸುತ್ತವೆ.

(3) ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕಿನ ಹೆಚ್ಚು ತ್ತಿರುವ ಥಕಬಾಕಿಯು ಪ್ರಮುಖ ಸಮಸ್ಯೆಯಾಗಿರುತ್ತದೆ.

ಪ್ರ. 4. ವ್ಯತ್ಯಾಸವನ್ನು ಸ್ಪಷ್ಟೀಕರಿಸಿರಿ (ಬೇಕಾದ ಮೂರು) : [12]

(1) ಮೊದಲನೆಯ ಸಾಧಾರಣ ಮಂಡಳದ ಸಭೆ ಮತ್ತು ಅಧಿಮಂಡಳದ ವಾರ್ಷಿಕ ಸರ್ವಸಾಧಾರಣ ಸಭೆ.

(2) ಜಿಲ್ಹಾ ಮಧ್ಯವರ್ತಿ ಸಹಕಾರಿ ಬ್ಯಾಂಕ ಮತ್ತು ರಾಜ್ಯ ಸಹಕಾರಿ ಬ್ಯಾಂಕ.

(3) ಕ್ರಿಯಾಶೀಲ ಸದಸ್ಯ ಮತ್ತು ಸಹಕಾರಿ ಸದಸ್ಯ.

(4) ಷೇರು ಮತ್ತು ಸಾಲಪತ್ರಿಕೆ.

ಪ್ರ. 5. ಸ್ವಲ್ಪದರಲ್ಲಿ ಟಿಪ್ಪಣಿಯನ್ನು ಬರೆಯಿರಿ (ಬೇಕಾದ ಎರಡು) : [8]

(1) ಸಹಕಾರ ಆಯುಕ್ತ ಮತ್ತು ನಿಬಂಧಕನ ಅಧಿಕಾರ

(2) ಸಹಕಾರಿ ಚಳುವಳಿಯ ಮುಂದಿನ ಸವಾಲಿನ (challenges) ಮೇಲಿನ ಉಪಾಯ

(3) ಮಹಾರಾಷ್ಟ್ರ ರಾಜ್ಯ ಸಹಕಾರಿ ಸಂಘ

ಪ್ರ. 6. ಕಾರಣವನ್ನು ಬರೆಯಿರಿ (ಬೇಕಾದ ಎರಡು) : [8]

(1) ಪಟ್ಟಣದ ಸಹಕಾರಿ ಬ್ಯಾಂಕಿನ ಕೆಲಸಕಾರ್ಯದಲ್ಲಿ ಅನೇಕ ಸಮಸ್ಯೆಗಳು ಇರುತ್ತವೆ.

(2) ಸಹಕಾರ ಆಯುಕ್ತ ಮತ್ತು ನಿಬಂಧಕನು ಒಬ್ಬ ಕಠಿಣ ಆಡಳಿತಗಾರನಾಗಿರುತ್ತಾನೆ.

(3) ಅಧ್ಯಕ್ಷನಿಗೆ ನಿರ್ಣಾಯಕ ಮತದ ಅಧಿಕಾರ ಇರುತ್ತದೆ.

(4) ಸದಸ್ಯರಿಗೆ ಸಹಕಾರಿ ಸಂಸ್ಥೆಯ ಒಟ್ಟು ಷೇರು ಬಂಡವಾಳದ 1/5 ಕ್ಕಿಂತ ಅಧಿಕ ಹಣದ ಷೇರನ್ನು ಖರೀದಿ ಮಾಡಲು ಬರುವುದಿಲ್ಲ.

ಪ್ರ. 7. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಬೇಕಾದ ಎರಡು) : [10]

(1) ನಿಯೋಜಿತ ಸಹಕಾರಿ ಸಂಸ್ಥೆಯ ಸಲುವಾಗಿ ಹೆಸರನ್ನು ಕಾಯ್ದು ಇಡುವುದರ ಬಗ್ಗೆ ನಿಬಂಧಕನಿಗೆ ವಿನಂತಿ ಮಾಡುವ ಪತ್ರ ಬರೆಯಿರಿ.

(2) ಸಹಕಾರಿ ಸಂಸ್ಥೆಯ ಸದಸ್ಯತ್ವದ ಅರ್ಜಿ ತಿರಸ್ಕರಿಸಿರುವದರ ಬಗ್ಗೆ ಪತ್ರ ಬರೆಯಿರಿ.

(3) ಸಹಕಾರಿ ಸಂಸ್ಥೆಯ ವೈಧಾನಿಕ ಪುಸ್ತಕಗಳಾವವು ?

ಪ್ರ.8. ಸಹಕಾರಿ ಸಂಸ್ಥೆಯ ಸದಸ್ಯರ ಅಧಿಕಾರ ಮತ್ತು ಹೊಣೆಗಾರಿಕೆಯನ್ನು ವಿಸ್ತಾರವಾಗಿ ವಿವರಿಸಿರಿ. [8]

ಅಥವಾ

ಮಹಾರಾಷ್ಟ್ರ ಸಹಕಾರಿ ಸಂಸ್ಥೆಯ ಕಾಯ್ದೆ 1960ರ ಅನುಸಾರ ಲೆಕ್ಕಪರಿಶೋಧನೆಯ ಬಗ್ಗೆ ಕಾನೂನಿನ ಸಿದ್ಧತೆಯನ್ನು ಸ್ಪಷ್ಟೀಕರಿಸಿರಿ.

◆◆◆